**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.2133/2023**

**ಪಿರ್ಯಾದುದಾರರು** ಃ ಸರ್ಕಾರದ ಪರವಾಗಿ : ಯಗಟಿ ಪೊಲೀಸರು

**-ವಿರುದ್ದ-**

**ಆರೋಪಿ/ತರು** ಃ ಶ್ರೀ ಮಲ್ಲಪ್ಪ ಮತ್ತು ಇತರರು

**ದೋಷಾರೋಪಣೆ**

**ಶ್ರೀಮತಿ ಅಮ್ರಿನ್ ಸುಲ್ತಾನ, ಬಿ.ಎ., ಎಲ್.ಎಲ್.ಬಿ.,** 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಮಲ್ಲಪ್ಪ ಬಿನ್ ಮಲ್ಲಪ್ಪ,
   ವಯಸ್ಸು ಸುಮಾರು 70 ವರ್ಷ, ವ್ಯವಸಾಯ,
   ವಾಸಃ ಚಿಕ್ಕಬಾಸೂರು ಗ್ರಾಮ, ಹಿರೆನಲ್ಲೂರು ಹೋಬಳಿ,
   ಕಡೂರು ತಾಲ್ಲೂಕು.
2. ಪರಮೇಶ ಬಿನ್ ಮಲ್ಲಪ್ಪ,
   ವಯಸ್ಸು ಸುಮಾರು 40 ವರ್ಷ, ವ್ಯವಸಾಯ.
   ವಾಸಃ ಚಿಕ್ಕಬಾಸೂರು ಗ್ರಾಮ, ಹಿರೆನಲ್ಲೂರು ಹೋಬಳಿ,
   ಕಡೂರು ತಾಲ್ಲೂಕು.
3. ಶ್ರೀಮತಿ ಕರಿಯಮ್ಮ ಕೋಂ ಮಲ್ಲಪ್ಪ,
   ವಯಸ್ಸು ಸುಮಾರು 65 ವರ್ಷ, ಗೃಹಿಣಿ,
   ವಾಸಃ ಚಿಕ್ಕಬಾಸೂರು ಗ್ರಾಮ, ಹಿರೆನಲ್ಲೂರು ಹೋಬಳಿ,
   ಕಡೂರು ತಾಲ್ಲೂಕು.

ಆದ ನಿಮ್ಮಗಳ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ದಿನಾಂಕ 20.04.2023 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಯಗಟಿ ಪೋಲಿಸ್ ಠಾಣಾ ಸರಹದ್ದಿನ ಚಿಕ್ಕಬಾಸೂರು ಗ್ರಾಮದ ಹರಿಜನ ಕಾಲೋನಿಯ ಮಲ್ಲಪ್ಪರವರ ಮನೆಯ ಹತ್ತಿರ ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಕುಡಿದು ಹೋಗಿ ಅವಾಚ್ಯವಾಗಿ ಬಾಯಿಗೆ ಬಂದಂತೆ ಹೀನಾಯವಾಗಿ ಬೈಯುತ್ತಿದ್ದು, ಆಗ ಚಾಸಾ.1 ರವರು ಮನೆಯಿಂದ ಹೊರಗೆ ಬಂದು ಏಕೆ ಬೈಯುತ್ತೀಯಾ ಹೆಂಗಸರಿಗೆ ಎಂದು ಕೇಳಿದಾಗ, ಅಲ್ಲಿಯೇ ಇದ್ದ 2 ಮತ್ತು 3 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಅವರ ಶಾಂತಿಭಂಗಕ್ಕೆ ಪ್ರೇರೇಪಣೆ ನೀಡುವ ರೀತಿಯಲ್ಲಿ ಅವಾಚ್ಯವಾಗಿ ಬೈದು ನಿಂದಿಸಿರುವ ಕಾರಣ,

ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದು ಆಪಾದಿಸುತ್ತಿದ್ದೇನೆ.

ಎರಡನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ನಿಮ್ಮ ಪೈಕಿ 1 ನೇ ಆರೋಪಿತರಾದ ನೀವು ಕೋಲಿನಿಂದ ಚಾಸಾ.1 ರವರ ಹಣೆಗೆ, ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿರುವ ಕಾರಣ, ನೀವು **ಭಾರತೀಯ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದು ಆಪಾದಿಸುತ್ತಿದ್ದೇನೆ.

ಮೂರನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ನಿಮ್ಮ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿರುವ ಕಾರಣ, ನೀವು **ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದು ಆಪಾದಿಸುತ್ತಿದ್ದೇನೆ.

ನಾಲ್ಕನೇಯದಾಗಿ, ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಅವಾಚ್ಯಚಾಗಿ ಬೈದು, ಹೊಡೆದು ನಂತರ ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ.1 ರವರಿಗೆ ನಿನ್ನನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುವ ಕಾರಣ, **ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದು ಆಪಾದಿಸುತ್ತಿದ್ದೇನೆ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

1 ನೇ ಆರೋಪಿ ಉತ್ತರ : ಹೌದು
2 ನೇ ಆರೋಪಿ ಉತ್ತರ : ಹೌದು
3 ನೇ ಆರೋಪಿ ಉತ್ತರ : ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

1 ನೇ ಆರೋಪಿ ಉತ್ತರ ಃ ವಿಚಾರಣೆಯಾಗಬೇಕು
2 ನೇ ಆರೋಪಿ ಉತ್ತರ ಃ ವಿಚಾರಣೆಯಾಗಬೇಕು
3 ನೇ ಆರೋಪಿ ಉತ್ತರ ಃ ವಿಚಾರಣೆಯಾಗಬೇಕು

ದಿನಾಂಕಃ 8 ನೇ ದಿವಸ ನವೆಂಬರ್ ಮಾಹೆ 2023 ನೇ ಇಸವಿ.

**(ಅಫ್ರಿನ್ ಸುಲ್ತಾನ),**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ.ಗಳು, ಕಡೂರು.